***ಓ ಎಸ್ 24/2023 ಪಿಡಬ್ಲ್ಯೂ.2***

***ಸಾಕ್ಷಿಯನ್ನು ದಿಃ 07.04.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ***

ಚಾಸಾ 3 ತುಳಸಿದಾಸ್ ಮತ್ತು ನಾನು ಸ್ನೇಹಿತರು ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ಗೋಪಾಲಸ್ವಾಮಿ ನನಗೆ ಪರಿಚಯ ಇದ್ದಾರೆ. ಮೃತ ಗೋಪಾಲಸ್ವಾಮಿರವರು ಅಕ್ಕಿ ಗಿರಣಿ ಇಟ್ಟಿದ್ದ ಕಾರಣ ನಾನು ಆ ಗಿರಣಿಗೆ ಭತ್ತ ಪೂರೈಕೆ ಮಾಡುತ್ತಿದ್ದುದರಿಂದ ಗೋಪಾಲಸ್ವಾಮಿರವರು ನನಗೆ ಪರಿಚಯ. ನಾನು ಆ ಗಿರಣಿಗೆ ಭತ್ತ ಪೂರೈಕೆ ಮಾಡುತ್ತಿದ್ದ ಬಗ್ಗೆ ಯಾವುದೇ ರಶೀದಿಗಳು ನನ್ನ ಬಳಿ ಇಲ್ಲ. ನನಗೆ ಗೋಪಾಲಸ್ವಾಮಿರವರಾಗಲಿ ಅವರ ಕುಟುಂಬಸ್ಥರಾಗಲಿ ನನಗೆ ಪರಿಚಯವಿಲ್ಲ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿರವರು ವಾದಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುವ ಸ್ವತ್ತಿನ ಸರ್ವೆ ನಂ. 43/2 ವಿಸ್ತೀರ್ಣ 0.10 ಗುಂಟೆ ಆಗಿದೆ. ಸರ್ವೆ ನಂ. 43/2 ರಲ್ಲಿ 0.10 ಗುಂಟೆ ಜಮೀನು ಇತ್ತು ಎಂಬ ಬಗ್ಗೆ ಆರ್ ಟಿ ಸಿ ನೋಡಿದ್ದೇನೆ. ದಿನಾಂಕ 24.02.2018 ರಂದು ಕ್ರಯದ ಕರಾರು ಪತ್ರ ಬರೆದುಕೊಟ್ಟರು. ಕ್ರಯದ ಮಾತುಕತೆಯು ದಿನಾಂಕ 24.02.2018 ರ ಹಿಂದಿನ ದಿನ ನಡೆದಿತ್ತು. ಮಾತುಕತೆಗೆ ಗೋಪಾಲಸ್ವಾಮಿರವರ ಗಿರಣಿಯಲ್ಲಿ ನಾನು, ತುಳಸಿರಾಮ್ ಹಾಗೂ ಸತ್ಯ ನಾರಾಯಣ ಸೇರಿದ್ದೆವು. ಆಗ ಬೇರೆ ಯಾರು ಇರಲಿಲ್ಲ. ಮಾತುಕತೆ ಸಮಯದಲ್ಲಿ ವಾದಿಯು ಗೋಪಾಲಸ್ವಾಮಿರವರಿಗೆ ಯಾವುದೇ ಹಣ ನೀಡಲಿಲ್ಲ. ಕ್ರಯಕ್ಕೆ ಸಂಬಂಧಿಸಿದಂತೆ ಆ ರೀತಿಯ ಯಾವುದೇ ಮಾತುಕತೆ ನಡೆದಿಲ್ಲ ಮತ್ತು ನಾವು ಅಂತಹ ಮಾತುಕತೆಗೆ ಸೇರಿಲ್ಲ ಎಂದರೆ ಸರಿಯಲ್ಲ. ದಿನಾಂಕ 29.01.2018, 01.02.2018 ರಂದು ಆರ್ ಟಿ ಜಿ ಎಸ್ ಹಣ ವರ್ಗಾವಣೆ

ಆಗಿರುವ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ, ಆದರೆ ತುಳಸೀದಾಸ್ ರವರ ತಂಗಿ ನನಗೆ ತಿಳಿಸಿದರು. ಆರ್ ಟಿ ಜಿ ಎಸ್ ಮೂಲಕ ಹಣದ ವರ್ಗಾವಣೆ ಯಾವ ಉದ್ದೇಶಕ್ಕಾಗಿ ಆಗಿತ್ತು ಎಂದರೆ ಜಮೀನು ಕ್ರಯದ ಉದ್ದೇಶಕ್ಕಾಗಿ ಆಗಿತ್ತು. ಸಾಲದ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರ್ ಟಿ ಜಿ ಎಸ್ ಮೂಲಕ ವಾದಿಯು ಗೋಪಾಲಸ್ವಾಮಿರವರಿಗೆ ಹಣ ವರ್ಗಾವಣೆ ಮಾಡಿದ್ದರೇ ಹೊರತು ಆ ಆರ್ ಟಿ ಜಿ ಎಸ್ ವರ್ಗಾವಣೆಯು ಕ್ರಯಕ್ಕೆ ಸಂಬಂಧಿಸಿದ ವರ್ಗಾವಣೆ ಅಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಗೋಪಾಲಸ್ವಾಮಿರವರ ಯಾವುದೇ ವ್ಯವಹಾರದ ಕುರಿತಂತೆ ನನಗೆ ಖುದ್ದು ಮಾಹಿತಿ ಇಲ್ಲದೆ ಇದ್ದರೂ ಸಹ ತುಳಸೀದಾಸ್ ಮತ್ತು ವಾದಿಯು ನನ್ನ ಸ್ನೇಹಿತರಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ತೀರಿಕೊಂಡ ನಂತರ ನಾನು ಹಾಗೂ ವಾದಿ, ತುಳಸೀದಾಸ್ ಮತ್ತು ಇತರೆ ಸಾಕ್ಷಿದಾರರು ಹಾಗೂ ಪತ್ರ ಬರಹಗಾರರು ಸೇರಿಕೊಂಡು ಕ್ರಯದ ಕರಾರು ಪತ್ರ ಮತ್ತು ಕ್ರಯದ ಕರಾರಿನ ಪೂರಕ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಗೋಪಾಲಸ್ವಾಮಿರವರ ಖಾತೆಗೆ ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡಿದ ಹಣವನ್ನು ಗೋಪಾಲಸ್ವಾಮಿರವರು ಬದುಕಿದ್ದಾಗಲೇ ವಾದಿಗೆ ಹಿಂತಿರುಗಿಸಿದ್ದಾರೆ ಎಂದರೆ ಸರಿಯಲ್ಲ. ಪಡೆದುಕೊಂಡಿದ್ದ ಸಾಲದ ಹಣವನ್ನು ಗೋಪಾಲಸ್ವಾಮಿರವರು ಹಿಂತಿರುಗಿಸಿದ್ದರೂ ಸಹ ಅವರ ಸಹಿಗಳುಳ್ಳ ಖಾಲಿ ಕಾಗದ ಪತ್ರಗಳನ್ನು ಬಳಸಿಕೊಂಡು ಅವರ ಸ್ವತ್ತನ್ನು ಹೇಗಾದರೂ ಮಾಡಿ ಲಪಟಾಯಿಸಿ ಕೊಳ್ಳಬೇಕು ಎಂಬ ದುರುದ್ದೇಶದಿಂದ ಕ್ರಯದ ಕರಾರು ಪತ್ರಗಳನ್ನು ಸೃಷ್ಟಿ ಮಾಡಿ ಆ ವ್ಯವಹಾರಕ್ಕೆ ನಾನು ಸಾಕ್ಷಿಯಾಗಿ ಇದ್ದೆ ಎಂಬಂತೆ ಬಿಂಬಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಯಾವುದೇ ವ್ಯವಹಾರ ನಡೆಯದ ಕಾರಣ ದಾವೆಯು ಖರ್ಚು ಸಹಿತ ವಜಾಗೊಳ್ಳಲು ಯೋಗ್ಯವಾಗಿದೆ ಎಂದರೆ ಸರಿಯಲ್ಲ. ಇನ್ನು ಹಲವಾರು ದಿನಾಂಕಗಳಂದು ವಾದಿಯು

ಗೋಪಾಲಸ್ವಾಮಿರವರಿಗೆ ಕ್ರಯದ ಹಣವನ್ನು ನೀಡಿದ್ದರು ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯು ನನ್ನ ಸ್ನೇಹಿತೆಯ ತಂಗಿಯಾಗಿರುವ ಕಾರಣ ಹೇಗಾದರೂ ಮಾಡಿ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

***ಸಾ ಓ ಹೇ ಸ ಒ***

**(ಬಾಬು ಎನ್)**
***ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,***
***ಪಾಂಡವಪುರ***